# ರಾಣಿ ಚೆನ್ನಮ್ಮನ ಶೌರ್ಯ; ಚಾರಣದ ಛಲ!

**ರಾಣಿ ಚೆನ್ನಮ್ಮನಂತೆ ಶೌರ್ಯ ಮೆರೆದದ್ದು, ಕಡಿದಾದ ಪರ್ವತದಲ್ಲಿ ಚಾರಣ.. ಸವಿನೆನಪುಗಳ ಸಾಲಿನಲ್ಲಿ ಸೇರಿವೆ.**

■ ಯಶೋದಾ ಪಾಟೀಲ, ವಿಜಯಪುರ



ಇದು 16 ವರ್ಷಗಳಷ್ಟು ಹಿಂದಿನ ಮಾತು. ವೀರರಾಣಿ ಕಿತ್ತೂರು ಚೆನ್ನಮ್ಮನ ಪ್ರೌಢಶಾಲೆಯಲ್ಲಿ ನಾನು 8ನೇ ತರಗತಿಯಲ್ಲಿ ಓದುತ್ತಿದ್ದೆ. ಮಕ್ಕಳಿಗೆ ನಾಲ್ಕು ಗೋಡೆಗಳ ಮಧ್ಯೆ ಪಾಠ ಮಾಡಿದರೆ ಸಾಲದು. ಸಾಹಿತ್ಯ, ಸಂಗೀತ, ಕ್ರೀಡೆ ಮತ್ತು ಸಾಹಸದ ತರಬೇತಿ ನೀಡಿದರೆ ಅದೊಂದು ಪರಿಪೂರ್ಣ ವಿದ್ಯೆ ಎಂದೆನಿಸುವುದು ಎಂಬುದು ಆ ಶಾಲೆಯ ಆಡಳಿತ ಮಂಡಳಿಯ ನಿಲುವು.

ಬೇಸಿಗೆ ಶಿಬಿರ ರಜಾ ಕಾಲದ ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಭೂಮಿಯಿಂದ ಆಕಾಶಕ್ಕೆ ಚಿಮ್ಮುವ ಪ್ಯಾರಾಚೂಟ್ ತರಬೇತಿಯಿಂದ ಒಂದು ವಾರಗಳ ಕಾಲ ನಮ್ಮ ಆಟದ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಆ ಶಿಬಿರದಲ್ಲಿ ನಾನು ಚೆನ್ನಮ್ಮಳ ಶೌರ್ಯದ ಒಂದಂಶವನ್ನಾದರೂ ಹೊಂದಬೇಕೆಂಬ ಉದ್ದೇಶದಿಂದ ತರಬೇತಿಯಲ್ಲಿ ಭಾಗವಹಿಸಿದೆ.

ಆಕಾಶದಲ್ಲಿ ಹಕ್ಕಿಯಂತೆ ರೆಕ್ಕೆ ಬಿಚ್ಚಿ ಹಾರುವುದಷ್ಟೇ ಅಲ್ಲ. ಎತ್ತರದ ಬೆಟ್ಟದ ಮೇಲಿಂದ ಧುಮುಕಿ ಎರಡೂ ಕೈಗಳು ಅಗಲವಾಗಿ ತೆರೆದು ವಿಮಾನದಂತೆ ಗಾಳಿಯಲ್ಲಿ ಈಜುತ್ತಾ ನಡೆದರೆ ಎಲ್ಲವು ಸರಿಯಾಗಿದೆ ಎಂದು ತರಬೇತಿದಾರರಿಗೆ ತಿಳಿಸುವ ಮೌನ ಮಾತಾಗಿತ್ತು. ಬಾನಲ್ಲಿ ಮುಕ್ತವಾಗಿ ಈಜಿ ಭೂಮಿಯಡೆಗೆ ದೃಷ್ಟಿ ಚೆಲ್ಲಿದಾಗ ಚೆನ್ನಮ್ಮಳ ಕೆಚ್ಚೆದೆಯ ಹೋರಾಟ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ ಅವರ ಶೌರ್ಯ ನನಗೆ ರೋಮಾಂಚನವನ್ನುಂಟು ಮಾಡಿತ್ತು. ಇದೇ ನನಗೆ ಸ್ಫೂರ್ತಿ ನೀಡಿದ್ದು ನಾನೆಂದಿಗೂ ಮರೆಯಲಾರೆ. ಇದನ್ನೇ ಮಾದರಿಯಾಗಿಟ್ಟುಕೊಂಡು ಮತ್ತೊಂದು ಸಾಹಸಕ್ಕೆ ಧುಮುಕಿದ್ದು ಇಲ್ಲಿದೆ ನೋಡಿ.

ಉತ್ತರಾಂಚಲ ರಾಜ್ಯದ ಉತ್ತರ ಕಾಶಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೆಹರು ಪರ್ವತಾರೋಹಣ ಸಂಸ್ಥೆಯು ರಾಷ್ಟ್ರದ ವಿವಿಧ ಭಾಗದ ನಾವು ಸೇರಿ 40 ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಿ ನಮ್ಮ ಶಾಲೆಗೆ ಕರೆ ತಂದಿತ್ತು. ಚಾರಣಕ್ಕೆ ಹೋಗುವ ಮುಂಚೆ ತೂಕ, ಎತ್ತರ, ರಕ್ತ ಮತ್ತು ದೇಹಾಕೃತಿ ಪರಿಶೀಲಿಸಿ ನಮ್ಮ ಶಾಲೆಯ ಸುತ್ತಮುತ್ತಲಿನಲ್ಲಿರುವ ಚಿಕ್ಕ ಪುಟ್ಟ ಬೆಟ್ಟ ಗುಡ್ಡಗಳನ್ನು ಬೆನ್ನಿಗೆ 1 ರಿಂದ 5 ಕಿ.ಗ್ರಾಂ. ಭಾರ ಹೊರಿಸಿ ನಿರ್ದಿಷ್ಟ ಸಮಯದಲ್ಲಿ ಗುರಿ ಮುಟ್ಟಲು ತರಬೇತಿಗೊಳಿಸಿದರು. ಒಟ್ಟು 15 ದಿನ ನಾವು ಚಾರಣಕ್ಕಾಗಿ ದೆಹಲಿ ಮುಖಾಂತರ ಉತ್ತರ ಕಾಶಿ ತಲುಪಿದೆವು.

ಸಮುದ್ರ ಮಟ್ಟದಿಂದ 4,600 ಅಡಿ ಎತ್ತರವಿರುವ ಈ ಪ್ರದೇಶ ದೇವಭೂಮಿ ಎಂದೇ ಹೆಸರಾಗಿದೆ. ನಿತ್ಯ ಹರಿದ್ವರ್ಣ, ರೌದ್ರ ರಮಣೀಯತೆಯ ಜೊತೆಗೆ ನಿಸರ್ಗ ಸೌಂದರ್ಯ ಗಗನಚುಂಬಿ ಹಿಮಾಚ್ಛಾದಿತ ಬೆಟ್ಟ ನಮ್ಮನ್ನು ಮಂತ್ರಮುಗ್ಧಗೊಳಿಸಿತು. ಅವುಗಳ ಮಧ್ಯೆ ತಲೆಯೆತ್ತಿ ನಿಂತ ತಪೋವನದಲ್ಲಿ ಚಾರಣಿಗರಾದ ನಮಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಇದೇ ಸುಸಂದರ್ಭ ಎಂದರಿತು ನಾನು ಮೊದಲಿನಿಂದಲೂ ಮಕ್ಕಳಿಗಾಗಿ ಕಥೆ, ಕವನ, ಪ್ರವಾಸ ಕಥನ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದೆ. ಆ ಸುಂದರ ಪರಿಸರದಲ್ಲಿ ಕುಳಿತು ‘ಹಸಿರೆ ಉಸಿರು’ ಕವನ ಬರೆದೆ. ಇಂತಹ 30 ಕವನಗಳ ಹಸ್ತಪ್ರತಿ (2003) ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಕಳಿಸಿದಾಗ ಯುವ ಬರಹಗಾರರ ಪ್ರೋತ್ಸಾಹಧನ ಯೋಜನೆ ಅಡಿ ನನ್ನ ಹಸ್ತಪ್ರತಿ ಆಯ್ಕೆಯಾಯಿತು. ‘ಪ್ರಯಾಗ’ ಗ್ರಂಥ ಪ್ರಕಟವಾಯಿತು. ಆ ಗ್ರಂಥದಲ್ಲಿನ ‘ಹಸಿರೆ ಉಸಿರು’ ಕವನ ಮಹಾರಾಷ್ಟ್ರ ರಾಜ್ಯ ಪಠ್ಯಪುಸ್ತಕದಲ್ಲಿ 8ನೇ ತರಗತಿಯಲ್ಲಿ ಐಚ್ಛಿಕ ಕನ್ನಡ ವಿಷಯ ಆಯ್ದುಕೊಂಡ ಮಕ್ಕಳ ಸುಗಮ ಭಾರತಿ ಪಠ್ಯಪುಸ್ತಕಕ್ಕೆ ಆಯ್ಕೆಯಾಗಿ ಇಂದಿಗೂ ಆ ಕವನವನ್ನು ಮಕ್ಕಳು ಓದುತ್ತಿದ್ದಾರೆ. ಅಂದ ಹಾಗೆ ಈ ಗ್ರಂಥಕ್ಕೆ ದತ್ತಿ ಪ್ರಶಸ್ತಿ ಕಿತ್ತೂರ ರಾಣಿ ಚೆನ್ನಮ್ಮ ಪ್ರಶಸ್ತಿ ನನ್ನನ್ನು ಅರಸಿ ಬಂದಿದ್ದು ನನ್ನ ಬರವಣಿಗೆಗೆ ಸಂದ ಜಯವಾಗಿದೆ.

ಮರುದಿನ ನಸುಕಿನ 5 ಗಂಟೆಗೆ 10 ಕಿ.ಮೀ. ದೂರ ನಡಿಗೆ ಮುಖಾಂತರ ಟೆಕ್ಲಾ ತಲುಪಿ ಸುಮಾರು 15 ಅಡಿ ಎತ್ತರದ ಬಂಡೆಗಲ್ಲನ್ನು ಹಗ್ಗದ ಸಹಾಯದಿಂದ ಹತ್ತಿದ್ದು ನಮ್ಮ ಮೊದಲನೆಯ ಸಾಹಸ. ಹಗ್ಗದ ಮೂಲಕವೇ ರಿವರ್‌ಕ್ರಾಸಿಂಗ್ ಸಾಹಸ ಮಾಡಿದ್ದು ಕೂಡ ನೆನಪಿನಂಗಳದಲ್ಲಿ ಹಸಿರಾಗಿದೆ. ಈ ಎಲ್ಲ ರೋಮಾಂಚಕ ಅನುಭವಗಳು ಸವಿನೆನಪಾಗಿಯೇ ಉಳಿದಿದೆ. ■